
# ಕಥೋಪದೇಶ

## “ಈಗ ಇದು ನನ್ನ ಮಗಳ ಮನೆ”

**ಹ**ಜರತ್ ಮುಹಮ್ಮದ್ ತನ್ನ ಮಗಳು ಫಾತಿಮಾಳ ಮನೆಯತ್ತ ಆತುರದಿಂದ ನಡೆದುಕೊಂಡು ಬರುತ್ತಿದ್ದನು. ಮನೆಯ ಮುಂದುಗಡೆ ಮಗಳು ನಿಂತಿದ್ದಳು. ಅವಳ ಮುಂಗೈ ತುಂಬ ಬೆಳ್ಳಿಯ ಬಳೆಗಳಿದ್ದವು. ಅವಳ ಮನೆಯ ಬಾಗಿಲುಗಳಿಗೆ ಕೆಂಪು ಬಣ್ಣದ ಜರತಾರಿ ಬಟ್ಟೆಗಳನ್ನೇ ಪರದೆಯಾಗಿ ಹಾಕಿದ್ದರು. ಮನೆ ತುಂಬ ಎಲ್ಲಿ ನೋಡಿದರೂ ಸಿಂಗಾರ!



ಇದನ್ನು ನೋಡಿದ ಮುಹಮ್ಮದನಿಗೆ ಏನೋ ಬೇಸರ. ಬಾಗಿಲನ್ನು ಕಂಡವನೇ, ಮನೆಯ ಒಳಗೆ ಬರದೆ, ತಿರುಗಿ ನಡೆದ. ಮಸೀದಿಯೊಳಗೆ ಬೇಸರದಿಂದ ಕುಸಿದ; ದುಃಖದಲ್ಲಿ ಮುಳುಗಿದ!

ಫಾತಿಮಾಳಿಗೆ ತನ್ನ ತಂದೆ ಎಲ್ಲಿಗೆ ಹೋಗಿದ್ದಾನೆ ಎಂಬ ಸುಳಿವು ಸಿಕ್ಕಿತು. ತಾತನನ್ನು ಕರೆದುಕೊಂಡು ಬರುವಂತೆ ತನ್ನ ಮಗನನ್ನು ಅಟ್ಟಿದಳು. ಮೊಮ್ಮಗ ಮಸೀದಿಗೆ ಹೋಗಿ ಮನೆಗೆ ಬರುವಂತೆ ತಾತನನ್ನು ಅಕ್ಕರೆಯಿಂದ ಕರೆದ. ಅದಕ್ಕೆ ತಾತನು ಹೀಗೆ ಹೇಳಿದ: “ನೋಡಲ್ಲಿ, ಸಾವಿರಾರು ಜನರು ತುಣುಕು ರೊಟ್ಟಿಯೂ ಸಿಗದೆ ದುಃಖಪಡುತ್ತಿದ್ದಾರೆ. ಆದರೆ ನನ್ನ ಮಗಳು ಬೆಳ್ಳಿಯ ಬಳೆಯನ್ನು ತೊಟ್ಟುಕೊಂಡಿದ್ದಾಳೆ; ಮನೆಯ ಬಾಗಿಲುಗಳಿಗೆ ರಂಗುರಂಗಿನ ಬಣ್ಣದ ಪರದೆಗಳನ್ನು ಹಾಕಿದ್ದಾಳೆ. ಈ ರೀತಿ ಮೆರೆಯುತ್ತಿದ್ದಾಳೆ. ಇದನ್ನು ಕಂಡು ನನಗೆ ಬಹಳ ನಾಚಿಕೆಯಾಯಿತು. ಅದನ್ನು ನನಗೆ ಸಹಿಸಲಾಗಲಿಲ್ಲ. ಅದಕ್ಕೆಂದೇ ನಾನು ಓಡಿ ಬಂದುಬಿಟ್ಟೆ.”

ಇದನ್ನು ಕೇಳಿ ಮೊಮ್ಮಗನು ಓಡೋಡಿ ಬಂದು ಅಮ್ಮನ ಹತ್ತಿರ ಬಂದ. ವಿಷಯವನ್ನೆಲ್ಲಾ ಹೇಳಿದ. ಮತ್ತೆ ಒಂದು ಗಂಟನ್ನು ಹೊತ್ತುಕೊಂಡು, ಮಸೀದಿಗೆ ಓಡಿದ. ಅದನ್ನು ತಾತನ ಎದುರಿಗೆ ಇರಿಸಿದ. ಅದನ್ನು ತೆಗೆದಾಗ ಕಂಡದ್ದೇನು? ಫಾತಿಮಾಳ ಬಳೆಗಳು, ಬಾಗಿಲುಗಳ ಪರದೆಗಳು ಮುಂತಾದವು. ತಾತ ಅವುಗಳನ್ನು ಮಾರಿಬಿಟ್ಟ. ಅದರಿಂದ ಕೊಂಡ ರೊಟ್ಟಿಗಳನ್ನು ಬಡಬಗ್ಗರಿಗೆ, ಹಸಿದವರಿಗೆ ತಿನ್ನಲು ಕೊಟ್ಟ.

ಅನಂತರ ಬಹಳ ಸಂತೋಷದಿಂದ ಮಗಳ ಮನೆಗೆ ಬಂದ. ಮನೆಯನ್ನು ನೋಡುತ್ತ ಸಂತೋಷದಿಂದ ಹೇಳಿದ, **“ಈಗ ಇದು ನನ್ನ ಮಗಳ ಮನೆ.”** ಫಾತಿಮಾಳನ್ನು ನೋಡಿ ಆನಂದದಿಂದ ಹೇಳಿದ, **“ಇವಳೇ ನನ್ನ ನಿಜವಾದ ಮಗಳು.”**

**ನಿಷ್ಕಳಂಕವಾದ ಪ್ರೇಮ, ಅಕಳಂಕವಾದ ಕಳಕಳಿ ಮತ್ತು ದಯೆ – ಇವುಗಳು ಇದ್ದಲ್ಲಿ ಜಗತ್ತಿನಲ್ಲಿ ಏನನ್ನೂ ಬೇಕಾದರೂ ಸಾಧಿಸಬಹುದು. ಸಂತೋಷ, ಸಮಾಧಾನ ದೊರೆಯುವುದು ಅವುಗಳಿಂದಲೇ.**

(**ಕಥೆ ಮತ್ತು ಚಿತ್ರ: ಪಿ. ಪುರುಷೋತ್ತಮ ಕಾರಂತ**)

## ಭಾರತ ದೇಶದ ಮಹಾಪುರುಷರು – ಚರಕ



ಚರಕನು ಪ್ರಾಚೀನ ಭಾರತದ ಅತ್ಯಂತ ಶ್ರೇಷ್ಠ ವೈದ್ಯನಾಗಿದ್ದಾನೆ. ಅವನು ತನ್ನ **ಚರಕಸಂಹಿತೆ**ಯನ್ನು ಸುಮಾರು ಕ್ರಿ.ಪೂ. ೮೦೦ ರಲ್ಲಿ ರಚಿಸಿದನು. **‘ಚರ್’** ಎಂದರೆ **‘ಚಲಿಸುವುದು’** ಎಂದು. ಅಂದರೆ ಚರಕನು ಸಂಚರಿಸುತ್ತಿದ್ದ ವೈದ್ಯನು. ತನ್ನ ಜ್ಞಾನವನ್ನು ಉಪಯೋಗಿಸಿಕೊಂಡು, ಕಷ್ಟಪಡುತ್ತಿದ್ದ ಜನರ ನೋವನ್ನು ಚರಕನು ನಿವಾರಿಸುತ್ತಿದ್ದನು. ಚರಕಸಂಹಿತೆಯಲ್ಲಿ ೮ ವಿಭಾಗಗಳಿವೆ; ೧೨೦ ಅಧ್ಯಾಯಗಳಿವೆ. ಆ ಎಂಟು ವಿಭಾಗಗಳೆಂದರೆ, ಸೂತ್ರಸ್ಥಾನ, ನಿಧಾನಸ್ಥಾನ, ವಿಮಾನಸ್ಥಾನ, ಶರೀರಸ್ಥಾನ, ಇಂದ್ರಿಯಸ್ಥಾನ, ಚಿಕಿತ್ಸಾಸ್ಥಾನ, ಕಲ್ಪಸ್ಥಾನ ಮತ್ತು ಸಿದ್ಧಿಸ್ಥಾನ. ಅಮೆರಿಕದ ಫಿಲಡೆಲ್ಫಿಯಾದ ಡಾ. ಜಾರ್ಜ್ ಕ್ಲಾರ್ಕ್ ಹೀಗೆ ಹೇಳುತ್ತಾರೆ: “ಚರಕನ ಗ್ರಂಥವನ್ನು ಓದುತ್ತಿದಂತೆ ನಾನು ಯಾವ ನಿಷ್ಕರ್ಷೆಗೆ ಬಂದೆನೆಂದರೆ, ಇಂದಿನ ವೈದ್ಯರು ಆಧುನಿಕ ಔಷಧಿಶಾಸ್ತ್ರದಲ್ಲಿ ಕೊಟ್ಟಿರುವ ಎಲ್ಲ ಔಷಧಿಗಳನ್ನು ಮತ್ತು ರಾಸಾಯನಿಕಗಳನ್ನು ತ್ಯಜಿಸಿ, ಚರಕನ ಪದ್ಧತಿಯಲ್ಲಿ ರೋಗಿಗಳಿಗೆ ಉಪಚಾರ ಮಾಡಿದರೆ, ಅವರ ಕಾರ್ಯವು ಬಹಳ ಮಟ್ಟಿಗೆ ಇಲ್ಲವಾಗುವುದು ಮತ್ತು ಈ ಜಗತ್ತಿನಲ್ಲಿ ಬಹುಕಾಲದ ವ್ಯಾಧಿಯಿಂದ ಬಳಲುತ್ತಿರುವ ಅಸಹಾಯಕರ ಸಂಖ್ಯೆಯೂ ಕಡಮೆಯಾಗುವುದು.”